Received on 7/11/2020 WUP.

ನೊಂ.ಅಂ.ಸ್ವೀ.ಬಾ

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಡಿಸಿಇ:ಎಸ್.ಎಸ್.1:ಎಲ್.ಎಸ್:
12:2020:312651

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ,
ಬೆಂಗಳೂರು, ದಿನಾಂಕ:05.11.2020

# ಸುತ್ತೋಲೆ

**ವಿಷಯ:** ಇಲಾಖಾ ವ್ಯಾಪ್ತಿಯ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ಹಿಸುತ್ತಿರುವ ಎಲ್ಲಾ ಅಧಿಕಾರಿಗಳು, ಬೋಧಕ ವರ್ಗದವರು ಮತ್ತು ಆಡಳಿತ ವರ್ಗದ ನೌಕರರ(ಬೋಧಕೇತರ) ರಜೆ ಮಂಜೂರಾತಿ ಬಗ್ಗೆ

**ಉಲ್ಲೇಖ:** ಇಲಾಖಾ ಸುತ್ತೋಲೆ ಸಂಖ್ಯೆ:ಕಾಶಿಇ:88:ಇತರೆ:2017-18:ಸೇವಿ, ದಿನಾಂಕ:24.10.2019

** ** **

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು ಮತ್ತು ಜಂಟಿ ನಿರ್ದೇಶಕರು ಈ ಕೆಳಕಂಡ ವಿಷಯಗಳ ಬಗ್ಗೆ ಅನಗತ್ಯವಾಗಿ ಈ ಕಛೇರಿಗಳಿಗೆ ಸಲ್ಲಿಸುತ್ತಿದ್ದ ಪ್ರಸ್ತಾವನೆಗಳ ಬಗ್ಗೆ ಮತ್ತು ಪ್ರತ್ಯಾಯೋಜಿತ ಅಧಿಕಾರವನ್ನು ಮೀರಿ ಕೆಲವು ವಿಷಯಗಳ ಬಗ್ಗೆ ಅವರ ಹಂತದಲ್ಲೇ ಮಂಜೂರಾತಿ ನೀಡುತ್ತಿರುವುದು ಕಂಡುಬಂದ ಕಾರಣ, ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಇಲಾಖಾ ವ್ಯಾಪ್ತಿಯ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ನೌಕರರು(ಬೋಧಕ ವರ್ಗದವರು ಮತ್ತು ಆಡಳಿತ ವರ್ಗದ ನೌಕರರು(ಬೋಧಕೇತರ)) ಹಲವು ವರ್ಷಗಳ ಹಿಂದೆ ವಿವಿಧ ಕಾರಣಗಳಿಗೆ ವೇತನ ರಹಿತ ಅಸಾಧಾರಣ ರಜೆ ಮಂಜೂರಾತಿ ಪಡೆದಿರುತ್ತಾರೆ.

ಆದರೆ ಹಲವು ವರ್ಷಗಳ ನಂತರ ಈಗಾಗಲೇ ವೇತನ ರಹಿತ ಅಸಾಧಾರಣ ರಜೆ ಮಂಜೂರುಗೊಂಡಿರುವ ರಜೆ ಅವಧಿಗೆ ಅವರ ಖಾತೆಯಲ್ಲಿರುವ ರಜೆಯನ್ನು ಮಂಜೂರುಗೊಳಿಸುವಂತೆ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮುಖ್ಯಸ್ಥರ ಮುಖೇನ ಮನವಿ/ಪ್ರಸ್ತಾವನೆಗಳನ್ನು ಈ ಕಛೇರಿಗೆ ಸಲ್ಲಿಸುತ್ತಿರುತ್ತಾರೆ.

ಅಂತೆಯೇ ಪ್ರಾದೇಶಿಕ ಜಂಟಿ ನಿರ್ದೇಶಕರು ಮತ್ತು ಪ್ರಾಂಶುಪಾಲರು ಅವರ ಹಂತದಲ್ಲಿ ಮಂಜೂರುಗೊಳಿಸಬಹುದಾದ ರಜೆ ಅವಧಿಯ ಮಂಜೂರಾತಿಗಾಗಿ ಈ ಕಛೇರಿಗೆ ಅನಗತ್ಯವಾಗಿ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುತ್ತಾರೆ.

..02..

ಉಲ್ಲೇಖಿತ ಸುತ್ತೋಲೆಯಲ್ಲಿನ ಅಂಶಗಳನ್ನು ಮುಂದುವರೆಸುತ್ತಾ, ಪ್ರಾದೇಶಿಕ ಜಂಟಿ ನಿರ್ದೇಶಕರು ಮತ್ತು ಪ್ರಾಂಶುಪಾಲರು ಅವರ ಹಂತದಲ್ಲಿ ಮಂಜೂರುಗೊಳಿಸಬಹುದಾದ ರಜೆಯ ಬಗ್ಗೆ ಈಗಾಗಲೇ ಉಲ್ಲೇಖಿತ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ(7)ರಲ್ಲಿ ತಿಳಿಸಲಾಗಿದ್ದು(**ಪ್ರತಿ ಲಗತ್ತಿಸಿದೆ**), ಸದರಿ ಅಂಶವನ್ನು ಪುನರ್ ಪ್ರಸ್ತಾಪಿಸುತ್ತಾ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 192(ಡಿ)ರಲ್ಲಿ ಪ್ರತ್ಯಾಯೋಜಿಸಿರುವಂತೆ ನೌಕರರಿಗೆ ರಜೆ ಮಂಜೂರುಗೊಳಿಸಲು ಕ್ರಮ ವಹಿಸುವಂತೆ ಹಾಗೂ ಅಧಿಕಾರದ ವ್ಯಾಪ್ತಿ ಮೀರಿದಲ್ಲಿ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಲು ಮತ್ತೊಮ್ಮೆ ಸೂಚಿಸುತ್ತಾ, ಅನಗತ್ಯ ಪತ್ರ ವ್ಯವಹಾರ ನಡೆಸದಂತೆ ಸೂಚಿಸಲಾಗಿದೆ.

ಇಲಾಖಾ ವ್ಯಾಪ್ತಿಯ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ನೌಕರರು(ಬೋಧಕ ವರ್ಗದವರು ಮತ್ತು ಆಡಳಿತ ವರ್ಗದ ನೌಕರರು(ಬೋಧಕೇತರ)) ವಿವಿಧ ಕಾರಣಗಳಿಗಾಗಿ ವೇತನ ರಹಿತ ಅಸಾಧಾರಣ ರಜೆ ಮಂಜೂರುಗೊಂಡಿರುವ ಅವಧಿಯ ಆದೇಶವನ್ನು ಮಾರ್ಪಾಡುಗೊಳಿಸಲು ಪ್ರಸ್ತಾವನೆಗಳನ್ನು ಮತ್ತು ಮನವಿಗಳನ್ನು ಪರಿಗಣಿಸದಂತೆ ಸೂಚಿಸಲಾಗಿದೆ.

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು(ಪ್ರ)**

ಇವರಿಗೆ:

1) ಈ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತ ಶಾಖೆಗೆ
2) ಇಲಾಖೆಯ ಎಲ್ಲಾ ಜಂಟಿ ನಿರ್ದೇಶಕರು ಮತ್ತು ಪ್ರಾಂಶುಪಾಲರಿಗೆ
3) ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ ಮತ್ತು ನೌಕರರಿಗೆ
4) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)
5) ಕಛೇರಿ ಪ್ರತಿ

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:88:ಇತರೆ:2017-18:ಸೇವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ತಾಂತ್ರಿಕ ಶಿಕ್ಷಣ ಭವನ. ಅರಮನೆ ರಸ್ತೆ.
ಬೆಂಗಳೂರು, ದಿನಾಂಕ:24.10.2019

# ಸುತ್ತೋಲೆ

ವಿಷಯ: ಇಲಾಖಾ ವ್ಯಾಪ್ತಿಯ ನೌಕರರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಈ ಕಛೇರಿಗೆ ಅನಗತ್ಯ ಪತ್ರಗಳನ್ನು ಪರಿಚಲಿಸುತ್ತಿರುವ ಬಗ್ಗೆ

** ** **

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು ಮತ್ತು ಜಂಟಿ ನಿರ್ದೇಶಕರು ಈ ಕೆಳಕಂಡ ವಿಷಯಗಳ ಬಗ್ಗೆ ಅನಗತ್ಯವಾಗಿ ಈ ಕಛೇರಿಗಳಿಗೆ ಪ್ರತಿಗಳನ್ನು ಸಲ್ಲಿಸುತ್ತಿರುವುದು ಮತ್ತು ಪ್ರತ್ಯಾಯೋಜಿತ ಅಧಿಕಾರವನ್ನು ಮೀರಿ ಕೆಲವು ವಿಷಯಗಳ ಬಗ್ಗೆ ಅವರ ಹಂತದಲ್ಲೇ ಮಂಜೂರಾತಿ ನೀಡುತ್ತಿರುವುದು ಕಂಡುಬರುತ್ತಿದೆ.

| | ನ್ಯೂನತೆ | ಕ್ರಮ |
|---|---|---|
| 1 | ಪ್ರಾದೇಶಿಕ ಕಛೇರಿ/ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಗಳಿಕೆ ರಜೆ ನಗಧೀಕರಣ, ಅಂತಿಮ ಗಳಿಕೆ ರಜೆ ನಗಧೀಕರಣ ಮತ್ತು ಅನುಪಾತ ಗಳಿಕೆ ರಜೆ ಮಂಜೂರಾತಿಗೆ ಸಂಬಂಧಿಸಿದಂತೆ ಮಹಾಲೇಖಪಾಲರಿಗೆ ವಿಳಾಸಿಸುವ ಪತ್ರಗಳ ಪ್ರತಿಗಳನ್ನು ಈ ಕಛೇರಿಗೆ ರವಾನಿಸುತ್ತಿರುವುದು | ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ಮಂಜೂರುಗೊಳಿಸಿರುವ ಪತ್ರದ ಪ್ರತಿಗಳ ಬಗ್ಗೆ ಈ ಕಛೇರಿಯಲ್ಲಿ ಯಾವುದೇ ಕ್ರಮ ವಹಿಸುವುದಿಲ್ಲವಾದ್ದರಿಂದ, ಸದರಿ ಪತ್ರಗಳನ್ನು ಈ ಕಛೇರಿಗೆ ಸಲ್ಲಿಸದಿರಲು ತಿಳಿಸಲಾಗಿದೆ |
| 2 | ವಾರ್ಷಿಕ ವೇತನ ಬಡ್ತಿ, ಗಳಿಕೆ ರಜೆ ನಗಧೀಕರಣ, ಮಾತೃತ್ವ ರಜೆ, ಪಿತೃತ್ವ ರಜೆ ಮತ್ತು ಇತರೆ ರಜೆಗಳನ್ನು ಮಂಜೂರುಗೊಳಿಸಿದ ಆದೇಶದ ಪ್ರತಿಗಳನ್ನು ಈ ಕಛೇರಿಗೆ ರವಾನಿಸುತ್ತಿರುವುದು | ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ಮಂಜೂರುಗೊಳಿಸಿರುವ ಪತ್ರದ ಪ್ರತಿಗಳ ಬಗ್ಗೆ ಈ ಕಛೇರಿಯಲ್ಲಿ ಯಾವುದೇ ಕ್ರಮ ವಹಿಸುವುದಿಲ್ಲವಾದ್ದರಿಂದ, ಸದರಿ ಪತ್ರಗಳನ್ನು ಈ ಕಛೇರಿಗೆ ಸಲ್ಲಿಸದಿರಲು ತಿಳಿಸಲಾಗಿದೆ |
| 3 | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಮತ್ತು ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಾರ್ಷಿಕ ವೇತನ ಬಡ್ತಿ, ಗಳಿಕೆ ರಜೆ ನಗಧೀಕರಣ, ಅಂತಿಮ ಗಳಿಕೆ ರಜೆ ನಗಧೀಕರಣ ಮತ್ತು ಇತ್ಯಾದಿಗಳ ಮಂಜೂರಾತಿಗೆ ಸಂಬಂಧಿಸಿದ ಪತ್ರಗಳನ್ನು ಅನಗತ್ಯವಾಗಿ ಈ ಕಛೇರಿಗೆ ಸಲ್ಲಿಸುತ್ತಿರುವುದು | ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರು ಮತ್ತು ಪ್ರಾಂಶುಪಾಲರುಗಳ ಹಂತದಲ್ಲಿ ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ಮಂಜೂರುಗೊಳಿಸಬೇಕಾಗಿರುವುದರಿಂದ ಈ ಪತ್ರಗಳ ಬಗ್ಗೆ ಈ ಕಛೇರಿಯಲ್ಲಿ ಯಾವುದೇ ಕ್ರಮ ವಹಿಸುವುದಿಲ್ಲವಾದ್ದರಿಂದ. ಸದರಿ ಪತ್ರಗಳನ್ನು ಈ ಕಛೇರಿಗೆ ಸಲ್ಲಿಸದಿರಲು ತಿಳಿಸಲಾಗಿದೆ |

| | | |
|---|---|---|
| 4 | ಸೇವೆಯಲ್ಲಿ ಕಾಲಮಿತಿ ವೇತನ ಬಡ್ತಿ, ಸ್ವಯಂ ಚಾಲಿತ ಹಿರಿಯ ವೇತನ ಶ್ರೇಣಿಗೆ ಬಡ್ತಿ ಮತ್ತು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳನ್ನು ಒಮ್ಮೆ ಪಡೆಯಬಹುದಾಗಿದ್ದು, ಆದರೆ ಈಗಾಗಲೇ ಸೌಲಭ್ಯಗಳನ್ನು ಪಡೆದಿದ್ದಾಗ್ಯೂ ಸಹ ನಿಯಮಗಳನ್ನು ಪರಿಶೀಲಿಸದೆ ಮತ್ತೊಮ್ಮೆ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದು | ಸಂಬಂಧಿಸಿದ ನೌಕರರ ಸೇವಾ ವಹಿಗಳಲ್ಲಿನ ವಿವರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನಂತರ ಅರ್ಹರಿದ್ದಲ್ಲಿ ಮಾತ್ರ ಸಲ್ಲಿಸಲು ಸೂಚಿಸಲಾಗಿದೆ |
| 5 | ಕಾಲಮಿತಿ ವೇತನ ಬಡ್ತಿ, ಸ್ವಯಂ ಚಾಲಿತ ಹಿರಿಯ ವೇತನ ಶ್ರೇಣಿಗೆ ಬಡ್ತಿ, ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳ ಪ್ರಸ್ತಾವನೆಗಳನ್ನು ನಿಗಧಿತ ಸಮಯದಲ್ಲಿ ಸಲ್ಲಿಸದೆ, ಅರ್ಹತಾ ದಿನಾಂಕದ ತರುವಾಯ ಸುದೀರ್ಘ ಅವಧಿ ತಡವಾಗಿ ಸಲ್ಲಿಸುತ್ತಿರುವುದು ಹಾಗೂ ಪದೋನ್ನತಿಗೊಂಡ ಹುದ್ದೆಗಳ ಬಡ್ತಿಯ ವೇತನ ನಿಗದಿಕರಣವನ್ನು ತಡವಾಗಿ ಸಲ್ಲಿಸುತ್ತಿರುವುದು | ಈ ಬಗ್ಗೆ ಗಮನ ಹರಿಸಿ, ಅರ್ಹತಾ ದಿನಾಂಕದ ನಂತರ ಮತ್ತು ಬಡ್ತಿಗೊಂಡ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ತರುವಾಯ ಕೂಡಲೇ ಸೇವಾ ವಹಿಯಲ್ಲಿ ವಿವರಗಳನ್ನು ಕಾಲೋಚಿತಗೊಳಿಸಿ(update) ಸಲ್ಲಿಸಲು ಸೂಚಿಸಲಾಗಿದೆ |
| 6 | ಕಾಲಮಿತಿ ವೇತನ ಬಡ್ತಿ, ಸ್ವಯಂ ಚಾಲಿತ ಹಿರಿಯ ವೇತನ ಶ್ರೇಣಿಗೆ ಬಡ್ತಿ, ಮತ್ತು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳನ್ನು ಕೇಂದ್ರ ಕಛೇರಿ ಹಂತದಲ್ಲಿ ಮಂಜೂರುಗೊಳಿಸಬೇಕಾಗಿದ್ದು, ಅದನ್ನು ಪ್ರಾಂಶುಪಾಲರು ಅವರ ಹಂತದಲ್ಲೇ ನಿಯಮಗಳನ್ನು ಉಲ್ಲಂಘಿಸಿ ಮಂಜೂರುಗೊಳಿಸಿರುವುದು ಕಂಡುಬಂದಿರುತ್ತದೆ. | ಕಾಲಮಿತಿ ವೇತನ ಬಡ್ತಿ, ಸ್ವಯಂ ಚಾಲಿತ ಹಿರಿಯ ವೇತನ ಶ್ರೇಣಿಗೆ ಬಡ್ತಿ, ಮತ್ತು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳನ್ನು ನೇಮಕಾತಿ ಪ್ರಾಧಿಕಾರವೇ ಮಂಜೂರುಗೊಳಿಸಬೇಕಾಗಿದ್ದು, ಸದರಿ ಪ್ರಸ್ತಾವನೆಗಳನ್ನು ಮಂಜೂರಾತಿಗಾಗಿ ಈ ಕಛೇರಿಗೆ ಸಲ್ಲಿಸುವುದು |
| 7 | ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 192(ಡಿ)ರಲ್ಲಿ ಪ್ರತ್ಯಾಯೋಜಿಸಿದಂತೆ ಜಂಟಿ ನಿರ್ದೇಶಕರು ಹಾಗೂ ಪ್ರಾಂಶುಪಾಲರು ಅವರ ಹಂತದಲ್ಲಿ ಮಂಜೂರುಗೊಳಿಸಬಹುದಾದ ರಜೆ ಅರ್ಜಿಗಳನ್ನು(ಮಾತೃತ್ವ ಮತ್ತು ಪಿತೃತ್ವ ರಜೆಯನ್ನು ಒಳಗೊಂಡಂತೆ) ಅನಗತ್ಯ ಈ ಕಛೇರಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವುದು | ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 192(ಡಿ)ರಲ್ಲಿ ಪ್ರತ್ಯಾಯೋಜಿಸಿರುವಂತೆ ನೌಕರರಿಗೆ ರಜೆ ಮಂಜೂರುಗೊಳಿಸಲು ಹಾಗೂ ಅಧಿಕಾರದ ವ್ಯಾಪ್ತಿ ಮೀರಿದಲ್ಲಿ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ |
| 8 | ನೌಕರರಿಗೆ ಸೇವಾ ಪ್ರಮಾಣ ಪತ್ರಗಳನ್ನು ಆಯಾ ಕಛೇರಿ ಮತ್ತು ಕಾಲೇಜುಗಳ ಮುಖ್ಯಸ್ಥರುಗಳು ನೀಡಬಹುದಾಗಿದ್ದು, ಆದರೆ ಸೇವಾ ಪ್ರಮಾಣ ಪತ್ರ ಒದಗಿಸುವಂತೆ ಈ ಕಛೇರಿಗೆ ಪತ್ರಗಳನ್ನು ಪರಿಚಲಿಸುತ್ತಿರುವುದು | ಇಲಾಖಾ ಸುತ್ತೋಲೆ ಸಂಖ್ಯೆ:ಕಾಶಿಇ:175:ಸೇ.ದೃ.ಪ್ರ:2019-20:ಸೇವಿ, ದಿನಾಂಕ:02.08.2019ರನ್ವಯ ಆಯಾ ಕಛೇರಿ/ಕಾಲೇಜುಗಳ ಮುಖ್ಯಸ್ಥರುಗಳು ಸೇವಾ ಪ್ರಮಾಣ ಪತ್ರವನ್ನು ನೀಡಲು ಸೂಚಿಸಲಾಗಿದೆ |
| 9 | ಸಾಂದರ್ಭಿಕ ರಜೆ, ನಿರ್ಬಂಧಿತ ರಜೆ, ಗಳಿಕೆ ರಜೆ, ಪರಿವರ್ತಿತ ರಜೆ, ಅರ್ಧ ವೇತನ ರಜೆ ಮತ್ತು ಇನ್ನಿತರೆ ರಜೆಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದ್ದು, ಆದಾಗ್ಯೂ ಈ ಕಛೇರಿಯಿಂದ ಅನಗತ್ಯ ಮಾರ್ಗದರ್ಶನ ಕೋರುವುದು | ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರಲ್ಲಿನ ನಿಯಮಗಳನ್ನು ಪರಾಮರ್ಶಿಸಿ ಅದರಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ |

| | | |
|---|---|---|
| 10 | ನೌಕರರು ಅನಧಿಕೃತವಾಗಿ ಗೈರು ಹಾಜರಾಗಿರುವಂತಹ ಪ್ರಕರಣಗಳನ್ನು ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲು ಪ್ರಸ್ತಾವನೆ ಸಲ್ಲಿಸದೆ ರಜೆ ಮಂಜೂರುಗೊಳಿಸುವಂತೆ ಪ್ರಸ್ತಾವನೆ ಸಲ್ಲಿಸುತ್ತಿರುವುದು | ಅನಧಿಕೃತವಾಗಿ ಗೈರು ಹಾಜರಿ ಪ್ರಕರಣಗಳನ್ನು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರಡಿ ಕ್ರಮ ವಹಿಸಲು ಈ ಕಛೇರಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ |
| 11 | ಪದೋನ್ನತಿಗೊಂಡ ಹುದ್ದೆಯ ವೇತನ ನಿಗದಿಕರಣ, ಕಾಲಮಿತಿ ವೇತನ ಬಡ್ತಿ, ಸ್ವಯಂ ಚಾಲಿತ ಹಿರಿಯ ವೇತನ ಶ್ರೇಣಿಗೆ ಬಡ್ತಿ ಮತ್ತು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳ ಪ್ರಸ್ತಾವನೆಗಳನ್ನು ಸಲ್ಲಿಸುವ ಪೂರ್ವದಲ್ಲಿ ಸೇವಾ ವಹಿಯಲ್ಲಿನ ಎಲ್ಲಾ ಸೇವಾ ವಿವರಗಳು(ಉದಾ:ವಾರ್ಷಿಕ ವೇತನ ಬಡ್ತಿ ಮತ್ತು ರಜೆ ವಿವರಗಳನ್ನು ಒಳಗೊಂಡಂತೆ) ಕಾಲೋಚಿತಗೊಳಿಸದೆ ಸಲ್ಲಿಸುತ್ತಿರುವುದು | ಸದರಿ ಆರ್ಥಿಕ ಸೌಲಭ್ಯಗಳನ್ನು ಮಂಜೂರುಗೊಳಿಸುವ ಸಂದರ್ಭದಲ್ಲಿ ಸೇವಾ ವಹಿಯಲ್ಲಿನ ಎಲ್ಲಾ ವಿವರಗಳನ್ನು ಕಾಲೋಚಿತಗೊಳಿಸಿ ಸಲ್ಲಿಸಲು ಸೂಚಿಸಲಾಗಿದೆ |
| 12 | ನೌಕರರು ಬಡ್ತಿ ನಿರಾಕರಿಸಿರುವ ಬಗ್ಗೆ ಸೇವಾ ವಹಿಯಲ್ಲಿ ನಮೂದಿಸದಿರುವುದು | ಇಲಾಖಾ ನೌಕರರು ಬಡ್ತಿ ನಿರಾಕರಿಸಿರುವ ಮಾಹಿತಿಯನ್ನು ಅವರ ಸೇವಾ ವಹಿಗಳಲ್ಲಿ ಕಡ್ಡಾಯವಾಗಿ ದಾಖಲಿಸಿ ದೃಢೀಕರಿಸಲು ಸೂಚಿಸಲಾಗಿದೆ |

ಮೇಲ್ಕಂಡಂತೆ ಉಲ್ಲೇಖಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಅನಗತ್ಯವಾಗಿ ಈ ಕಛೇರಿಗೆ ಪತ್ರ ವ್ಯವಹಾರ ನಡೆಸದೆ ಹಾಗೂ ಪ್ರತಿಗಳನ್ನು ಸಲ್ಲಿಸದೆ ಮತ್ತು ಅಧಿಕಾರ ವ್ಯಾಪ್ತಿ ಮೀರಿ ಸೌಲಭ್ಯಗಳನ್ನು ಮಂಜೂರುಗೊಳಿಸದೆ ನಿಯಮಗಳನ್ನು ಪರಿಶೀಲಿಸಿ ಅದರಂತೆ ಕೇಂದ್ರ ಕಛೇರಿ ಹಂತದಲ್ಲಿ ಕ್ರಮ ಕೈಗೊಳ್ಳಬೇಕಾದ ಪ್ರಕರಣಗಳನ್ನು ಮಾತ್ರ ಸೂಕ್ತ ದಾಖಲೆ ಮತ್ತು ಶಿಫಾರಸ್ಸನೊಂದಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಮುಖ್ಯ ಆಡಳತಾಧಿಕಾರಿಗಳು(ಪ್ರಭಾರ)

ಇವರಿಗೆ:

1) ಈ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತ ಶಾಖೆಗೆ
2) ಇಲಾಖೆಯ ಎಲ್ಲಾ ಜಂಟಿ ನಿರ್ದೇಶಕರು ಮತ್ತು ಪ್ರಾಂಶುಪಾಲರಿಗೆ
3) ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ ಮತ್ತು ನೌಕರರಿಗೆ
4) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)
5) ಕಛೇರಿ ಪ್ರತಿ